
# ಶ್ರೀಮದ್ಭಾಗವತ ಸಾರ



ಎ. ಮುರಳೀಧರ

## ಪಂಚಮ ಸ್ಕಂಧ

**ಪ್ರಿಯವ್ರತ ರಾಜನ ವೃತ್ತಾಂತ:** ಸ್ವಾಯಂಭುವ ಮನುವಿನ ಎರಡನೆಯ ಮಗ ಪ್ರಿಯವ್ರತ. ಅವನು ಪರಮ ಭಾಗವತೋತ್ತಮ. ಅವನೊಬ್ಬ ಜ್ಞಾನಯೋಗಿ. ಯಾವಾಗಲೂ ಸ್ವಾತ್ಮಾನಂದದಲ್ಲೇ ಇರುತ್ತಿದ್ದನು. ಅಧ್ಯಾತ್ಮದಲ್ಲೇ ಆಸಕ್ತನಾಗಿದ್ದನು. ಇಂಥ ಮಗನನ್ನು ಕರೆದು ಮನುವು, "ಇನ್ನು ಮುಂದೆ ನೀನು ರಾಜ್ಯಭಾರ ವಹಿಸಿ ಕೊಳ್ಳಬೇಕು" ಎಂದು ಸೂಚಿಸಿದನು. ಆದರೆ ಪ್ರಿಯವ್ರತನು ತಂದೆಯ ಮಾತನ್ನು ನಯವಾಗಿ ತಿರಸ್ಕರಿಸಿದನು. ತನಗೆ ಲೌಕಿಕ ಸುಖವಾಗಲಿ, ರಾಜ್ಯವಾಗಲಿ ಬೇಡವೆಂದು ಖಡಾಖಂಡಿತವಾಗಿ ಹೇಳಿಬಿಟ್ಟನು. ಗಂಧಮಾದನ ಪರ್ವತಕ್ಕೆ ತೆರಳಿ ತಪಸ್ಸಿಗೆ ಕುಳಿತನು. ತಂದೆಯಾದ ಮನುವು ಉಪಾಯ ಕಾಣದೆ ಬ್ರಹ್ಮದೇವನ ಮೊರೆಹೋದನು. ಬ್ರಹ್ಮದೇವನು ನಾರದರೊಂದಿಗೆ ಪ್ರಿಯವ್ರತನಿದ್ದ ಜಾಗಕ್ಕೆ ಬಂದನು. ಅಲ್ಲಿ ನಾರದರು ಪ್ರಿಯವ್ರತನಿಗೆ ಪಿತೃವಾಕ್ಯಪರಿಪಾಲನೆಯ ಮಹತ್ವ ಮತ್ತು ಗೃಹಸ್ಥಾಶ್ರಮದ ಮಹಿಮೆಯನ್ನು ಬಣ್ಣಿಸಿದರು. ಅಧ್ಯಾತ್ಮದಲ್ಲಿ ಒಲವನ್ನು ಹೊಂದಿದ್ದರೆ ಸಂಸಾರದಲ್ಲಿದ್ದರೂ ಮೋಕ್ಷವು ಸಿಕ್ಕೇ ಸಿಗುತ್ತದೆ ಎಂಬ ಸತ್ಯವನ್ನು ಮನಗಾಣಿಸಿದರು. "ನೀನು ಜನಿಸಿದ್ದು ಮಾನವ ಸಂತತಿಯನ್ನು ಅಭಿವೃದ್ಧಿ ಮಾಡಲು. ಅದು ನಿನ್ನ ಕರ್ತವ್ಯ. ಈ ಕರ್ತವ್ಯವನ್ನು ಮಾಡದಿರುವುದು ಮಹಾಪಾಪ" ಎಂದು ತಿಳಿಸಿದರು.

ಈ ಉಪದೇಶ ಪ್ರಿಯವ್ರತನ ಮೇಲೆ ಪ್ರಭಾವ ಬೀರಿತು. ಅವನು ತನ್ನ ತಂದೆಯೊಡನೆ ರಾಜ್ಯಕ್ಕೆ ಹಿಂತಿರುಗಿದನು. ರಾಜ್ಯಭಾರ ಕಾರ್ಯವನ್ನು ವಹಿಸಿಕೊಂಡನು. ವಿಶ್ವಕರ್ಮನ ಮಗಳಾದ ಬರ್ಹಿಷ್ಮತಿಯನ್ನು ಮದುವೆಯಾದನು. ಒಬ್ಬ ಹೆಣ್ಣುಮಗಳು ಮತ್ತು ಹತ್ತು ಜನ ಗಂಡು ಮಕ್ಕಳನ್ನು ಪಡೆದನು. ಎಲ್ಲ ಮಕ್ಕಳೂ ಧಾರ್ಮಿಕ ಪ್ರವೃತ್ತಿಯವರು. ತಂದೆಯ ಹಾದಿಯಲ್ಲಿಯೇ ನ್ಯಾಯಯುತವಾಗಿ ನಡೆಯುತ್ತಿದ್ದರು.

ಇಷ್ಟೆಲ್ಲ ಲೌಕಿಕ ಕಾರ್ಯಗಳಲ್ಲಿ ತೊಡಗಿದ್ದರೂ ಪ್ರಿಯವ್ರತನು ಅಧ್ಯಾತ್ಮದ ಬಗೆಗಿನ ತನ್ನ ಆಸಕ್ತಿಯನ್ನು ಸ್ವಲ್ಪವಾದರೂ ಕಡಿಮೆ ಮಾಡಿಕೊಂಡಿರಲಿಲ್ಲ. ಭಾಗವತಧರ್ಮದ ಪ್ರವರ್ತಕನಾಗಿ ಬಾಳುವೆ ಮಾಡಿದ್ದರಿಂದ ಅವನಲ್ಲಿ ಅದ್ಭುತವಾದ ತೇಜಸ್ಸು ಕಾಣಿಸುತ್ತಿತ್ತು. ಅದರ ಪ್ರಭಾವದಿಂದ ಆತನ ದೇಹದಿಂದ ಯಾವಾಗಲೂ ಬೆಳಕಿನ ಕಿರಣಗಳು ಹೊರಹೊಮ್ಮುತ್ತಿದ್ದವು. ರಾತ್ರಿಯ ಕತ್ತಲಲ್ಲಿ ಅದೇ ಅವನಿಗೆ ದಾರಿ ತೋರಿಸುತ್ತಿತ್ತು.

ಪ್ರಿಯವ್ರತನು ತನ್ನ ಪರಾಕ್ರಮದಿಂದ ಇಡೀ ಭೂಮಂಡಲವನ್ನೇ ವಶಪಡಿಸಿಕೊಂಡಿದ್ದನು. ಬಳಿಕ ಅದನ್ನು ದ್ವೀಪಗಳಾಗಿ ವಿಂಗಡಿಸಿದನು. ಇಡೀ ಭೂಮಂಡಲವನ್ನು ಜನವಸತಿಗಾಗಿ ಅನುಕೂಲವಾಗುವಂತೆ ಪರಿವರ್ತಿಸಿದನು. ಕಡೆಯಲ್ಲಿ ತನ್ನ ಹಿರಿಯ ಮಗನಾದ ಆಗ್ನೀಧ್ರನಿಗೆ ಪಟ್ಟಾಭಿಷೇಕ ಮಾಡಿದನು. ಅಧ್ಯಾತ್ಮ ಸಾಧನೆಗಾಗಿ ಅರಣ್ಯಕ್ಕೆ ತೆರಳಿದನು. ದೇಹತ್ಯಾಗ ಮಾಡಿ ಶ್ರೀಹರಿಯ ಪಾದವನ್ನು ಸೇರಿದನು.

**ಆಗ್ನೀಧ್ರ :** ಆಗ್ನೀಧ್ರನು ತಂದೆಯಂತೆಯೇ ಧರ್ಮದಿಂದ ರಾಜ್ಯವನ್ನು ಆಳುತ್ತಿದ್ದನು. ಬಹಳ ವರ್ಷ ಕಳೆದರೂ ಆತನಿಗೆ ಪುತ್ರಸಂತಾನವಾಗಲಿಲ್ಲ. ಅದಕ್ಕಾಗಿ ಬ್ರಹ್ಮದೇವರನ್ನು ಒಲಿಸಿಕೊಳ್ಳಲು ತಪಸ್ಸು ಮಾಡಲು ನಿಶ್ಚಯಿಸಿದನು. ಅರಣ್ಯಪ್ರದೇಶವನ್ನು ದಾಟಿ ಮೇರುಪರ್ವತದ ತಪ್ಪಲಿಗೆ ಬಂದನು. ಆತನ ಬಯಕೆಯನ್ನು ಅರಿತ ಬ್ರಹ್ಮದೇವರು ಪೂರ್ವಚಿತ್ತಿ ಎಂಬ ಅಪ್ಸರೆಯನ್ನು ಅವನ ಬಳಿಗೆ ಕಳುಹಿಸಿದರು. ಆಕೆಯ ಸೌಂದರ್ಯಕ್ಕೆ ಮರುಳಾದ ಆಗ್ನೀಧ್ರ ಅವಳನ್ನೇ ವಿವಾಹ ಮಾಡಿಕೊಂಡನು. ಒಂಬತ್ತು ವರ್ಷ ಸಂಸಾರಸುಖವನ್ನು ಅನುಭವಿಸಿ ಒಂಬತ್ತು ಪುತ್ರರನ್ನು ಪಡೆದನು. ನಂತರ ಅಪ್ಸರೆಯು ತನ್ನ ಸ್ವಸ್ಥಾನಕ್ಕೆ ಹಿಂತಿರುಗಿದಳು. ಆಗ್ನೀಧ್ರ ಅವಳ ನೆನಪಲ್ಲೇ ವಿರಹವೇದನೆಯಿಂದ ಬಳಲುತ್ತಿದ್ದನು. ಕಡೆಗೆ ವೈರಾಗ್ಯ ತಾಳಿದನು. ಅರಣ್ಯಕ್ಕೆ ತೆರಳಿ ಭಗವಂತನನ್ನು ಧ್ಯಾನಿಸುತ್ತಾ ತನ್ನ ಜೀವನವನ್ನು ಅಂತ್ಯಗೊಳಿಸಿಕೊಂಡನು.

**ನಾಭಿರಾಜ:** ಆಗ್ನೀಧ್ರನ ಹಿರಿಯ ಮಗನಾದ ನಾಭಿಯು ಅನಂತರ ರಾಜನಾದನು. ಇವನು ಮೇರುದೇವಿ ಎಂಬ ಕನ್ಯೆಯೊಡನೆ ವಿವಾಹ ಮಾಡಿಕೊಂಡನು. ಇವನು ಸಹ ತನ್ನ ಹಿರಿಯರ ಪರಂಪರೆಯಂತೆ ರಾಜ್ಯವಾಳಿದನು. ಇವನಿಗೂ ಪುತ್ರಸಂತಾನವಾಗಲಿಲ್ಲ. ಆದ್ದರಿಂದ, ದೇಶವಿದೇಶಗಳಿಂದ

ಋಷಿಮುನಿಗಳನ್ನು ಕರೆಸಿಕೊಂಡು ಪುತ್ರಕಾಮೇಷ್ಟಿಯಾಗವನ್ನು ಮಾಡಿದನು. ಶ್ರೀಮನ್ನಾರಾಯಣನ ಸಮಾನನಾದ ಮಗನು ತನಗೆ ಜನಿಸಬೇಕೆಂದು ಅವನ ಇಚ್ಛೆಯಾಗಿತ್ತು. ಆತನ ಭಕ್ತಿಗೆ ಮೆಚ್ಚಿದ ನಾರಾಯಣನು ಪ್ರತ್ಯಕ್ಷನಾದನು. "ನನ್ನ ಸಮನಾದವರು ಯಾರೂ ಇಲ್ಲ, ಆದ್ದರಿಂದ ನಾನೇ ನಿನಗೆ ಮಗನಾಗಿ ಜನಿಸುತ್ತೇನೆ" ಎಂದು ಹೇಳಿ ಅದೃಶ್ಯನಾದನು. ಹಾಗೆ ಹುಟ್ಟಿದವನೇ ಋಷಭ.

**ಋಷಭಾವತಾರ:** ಋಷಭನು ಸದ್ಗುಣಸಂಪನ್ನನಾಗಿದ್ದನು; ಅಸಮಾನ ಬಲವುಳ್ಳವನಾಗಿ ಬೆಳೆದನು. ಕೆಲವು ಕಾಲ ಗುರುಕುಲದಲ್ಲಿ ಶಿಕ್ಷಣ ಪಡೆದನು. ದೊಡ್ಡವನಾದ ಮೇಲೆ ದೇವೇಂದ್ರನಿಂದ ಕಳುಹಿಸಲ್ಪಟ್ಟ ಜಯಂತಿ ಎಂಬ ಕನ್ಯೆಯೊಡನೆ ವಿವಾಹವಾದನು. ತಂದೆಯ ತರುವಾಯ ಪಟ್ಟಕ್ಕೇರಿದ ಋಷಭನು ಪ್ರಜೆಗಳನ್ನು ಮಕ್ಕಳಂತೆ ಕಾಪಾಡಿದನು. ಅವನಿಗೆ ನೂರು ಮಂದಿ ಮಕ್ಕಳಾದರು. ಇವರಲ್ಲಿ ಹಿರಿಯನೇ ಭರತ. ಇವನಿಂದಲೇ ನಮ್ಮ ದೇಶಕ್ಕೆ 'ಭಾರತ' ಎಂಬ ಹೆಸರು ಬಂದಿದೆ. ಋಷಭರಾಜನು ಗೃಹಸ್ಥರಿಗೆ ಒಂದು ಆದರ್ಶ. ಇವನು ಸ್ವತಃ ದೇಶಸಂಚಾರ ಮಾಡುತ್ತಿದ್ದನು. ಯಜ್ಞಯಾಗಾದಿಗಳನ್ನು ಆಚರಿಸುತ್ತಿದ್ದನು. ಹೀಗೆ ಉತ್ತಮ ಬಾಳನ್ನು ಬಾಳಿದನು.

ಒಮ್ಮೆ ಋಷಭನು ಬ್ರಹ್ಮಾವರ್ತ ಪ್ರದೇಶದಲ್ಲಿ ಸಂಚಾರ ಮಾಡುತ್ತಿದ್ದನು. ಅಲ್ಲಿ ಅನೇಕ ಮಂದಿ ಬ್ರಹ್ಮರ್ಷಿಗಳು ಸೇರಿದ್ದರು. ಅವರಲ್ಲಿ ಋಷಭದೇವನ ಮಕ್ಕಳೂ ಇದ್ದರು. ಈ ಸಭೆಗೆ ಋಷಭ ದೇವನು ಹೀಗೆ ಜ್ಞಾನೋಪದೇಶ ಮಾಡಿದನು:

"ಎಲೈ ಋಷಿಗಳೇ, ಈ ಲೋಕದಲ್ಲಿ ಜೀವಿಗಳು ಬಹು ಪುಣ್ಯದಿಂದ ಶ್ರೇಷ್ಠವಾದ ಮಾನವ ದೇಹವನ್ನು ಗಳಿಸಿದ್ದಾರೆ. ಇದು ದೊರೆತಿರುವುದು ಕೇವಲ ಭೋಗಸುಖವನ್ನು ಅನುಭವಿಸುವುದಕ್ಕಲ್ಲ ಎಂಬುದನ್ನು ನಾವು ಮೊದಲು ತಿಳಿಯಬೇಕು. ನಿಯಂತ್ರಣಗೊಂಡ ಮನಸ್ಸು ಶ್ರೀಮನ್ನಾರಾಯಣನಲ್ಲಿ ಭಕ್ತಿಯನ್ನು ಉಂಟುಮಾಡುತ್ತದೆ. ಪರಮಾತ್ಮನ ಧ್ಯಾನಕ್ಕೆ ಪ್ರೇರೇಪಿಸುತ್ತದೆ; ಯಾವುದೇ ವಿಚಾರದಲ್ಲಿ ಪ್ರಕ್ಷುಬ್ಧಗೊಳ್ಳದೆ, ಶುದ್ಧ ಮತ್ತು ಸದ್ವಿಚಾರ ಚಿಂತನೆಗಳಿಂದ ನಮ್ಮನ್ನು ಅಧ್ಯಾತ್ಮದ ಮಾರ್ಗದೆಡೆಗೆ ಕರೆದೊಯ್ಯುತ್ತದೆ. ಪ್ರಕೃತಿ, ಪುರುಷ ಮತ್ತು ಈಶ್ವರ – ಮೂರೂ ತತ್ತ್ವಗಳು ಬೇರೆ ಬೇರೆಯಾಗಿವೆ. ಭಗವಂತನು ಸೃಷ್ಟಿಯ ಎಲ್ಲರಲ್ಲಿಯೂ, ಎಲ್ಲೆಡೆಯಲ್ಲಿಯೂ ಇದ್ದಾನೆ. ಆದ್ದರಿಂದ ಜಗತ್ತಿನ ಎಲ್ಲ ಚರಾಚರ ವಸ್ತುಗಳನ್ನೂ ಗೌರವದಿಂದ ಕಾಣಬೇಕು."

ಹೀಗೆ ಋಷಭದೇವನು ಆ ಋಷಿಗಣಕ್ಕೆ ಉಪದೇಶಿಸಿದನು. ನಂತರ ತನ್ನ ರಾಜ್ಯಕ್ಕೆ ಹಿಂತಿರುಗಿ, ಹಿರಿಯ ಮಗನಾದ ಭರತನಿಗೆ ಪಟ್ಟಾಭಿಷೇಕ ಮಾಡಿದನು. ತಾನು ಅರಣ್ಯಕ್ಕೆ ಹೋಗಿ ತಪಸ್ಸು ಮಾಡಿದನು. ಯೋಗಸಿದ್ಧಿಯನ್ನು ಗಳಿಸಿದ್ದ ಋಷಭನು ಕ್ರಮೇಣ ಶರೀರಾಭಿಮಾನವನ್ನು ಸಂಪೂರ್ಣವಾಗಿ ತೊರೆದನು. ಕಾಡಿನಲ್ಲಿ ದಿಗಂಬರನಾಗಿ ಸಂಚರಿಸುತ್ತಿದ್ದನು. ಒಂದು ಕಾಡ್ಗಿಚ್ಚಿನಲ್ಲಿ ತನ್ನ ದೇಹತ್ಯಾಗ ಮಾಡಿ, ಮುಕ್ತಿಯನ್ನು ಹೊಂದಿದನು.

**ಭರತ:** ಭರತನು ವಿಶ್ವರೂಪನ ಮಗಳಾದ ಪಂಚಜನಿ ಎಂಬ ಕನ್ಯೆಯನ್ನು ವಿವಾಹವಾದನು. ಐದು ಮಂದಿ ಪುತ್ರರನ್ನು ಪಡೆದನು. ಇವನೂ ಒಬ್ಬ ಮಹಾಭಕ್ತ. ಧರ್ಮಕ್ಕೆ ಚ್ಯುತಿ ಬರದಂತೆ ರಾಜ್ಯವಾಳಿದನು. ಅನೇಕ ಯಜ್ಞಯಾಗಾದಿಗಳನ್ನು ಮಾಡಿದನು. ಎಲ್ಲವನ್ನೂ ಹೃದಯಪೂರ್ವಕವಾಗಿ ಪರಮಾತ್ಮನ ಭಕ್ತಿಯಿಂದ ಮಾಡುತ್ತಿದ್ದನು. ಇದರಿಂದ ತೃಪ್ತನಾದ ಭಗವಂತನು ಆತನ ಹೃದಯದಲ್ಲಿಯೇ ತನ್ನ ದರ್ಶನವನ್ನು ನೀಡಿದನು. ಇದಾದ ಮೇಲೆ ಅವನಿಗೆ ರಾಜ್ಯ, ಐಶ್ವರ್ಯ – ಎಲ್ಲವೂ ಕ್ಷಣಿಕ ಎನ್ನಿಸಿತು. ರಾಜ್ಯವನ್ನು ತನ್ನ ಮಕ್ಕಳಿಗೆ ಬಿಟ್ಟುಕೊಟ್ಟನು. ಗಂಡಕೀ ನದಿಯ ತೀರದಲ್ಲಿರುವ ಪುಲಹಾಶ್ರಮಕ್ಕೆ ಬಂದನು. ಆ ನದಿಯಲ್ಲಿ ಸಾಲ ಗ್ರಾಮ ಶಿಲೆಗಳು ದೊರೆಯುತ್ತಿದ್ದವು. ಇದರ ದಡದಲ್ಲಿ ಒಂದು ಕುಟೀರವನ್ನು ಕಟ್ಟಿಕೊಂಡನು. ವಿರಕ್ತನಾಗಿ ಗೆಡ್ಡೆಗೆಣಸು ತಿನ್ನುತ್ತಾ ಭಗವಂತನ ಧ್ಯಾನ ಮಾಡುತ್ತಿದ್ದನು.

ಗರ್ಭಧರಿಸಿದ್ದ ಹೆಣ್ಣು ಜಿಂಕೆಯೊಂದು ಒಂದು ದಿನ ನೀರು ಕುಡಿಯಲು ನದಿಯ ಬಳಿಗೆ ಬಂದಿತು. ಸಿಂಹವೊಂದು ಅದನ್ನು ನೋಡಿ ಘರ್ಜಿಸಿ ಹಿಡಿಯಲು ಹಾರಿತು. ಭಯದಿಂದ ಜಿಂಕೆಯು ಆಚೆಯ ದಡಕ್ಕೆ ಹಾರಿತು. ಆಗ ಅದಕ್ಕೆ ಗರ್ಭಸ್ರಾವವಾಗಿ ಮರಿಯು ಜನಿಸಿ, ತಾಯಿ ಜಿಂಕೆಯು ಮರಣ ಹೊಂದಿತು. ನೀರಿನ ಪಾಲಾಗುತ್ತಿದ್ದ ಜಿಂಕೆಮರಿಯನ್ನು ಕಂಡು ಕರುಣೆಯಿಂದ ಭರತನು ಅದನ್ನು ರಕ್ಷಿಸಿದನು. ತನ್ನ ಆಶ್ರಮಕ್ಕೆ ಕರೆದುಕೊಂಡು ಬಂದು ಅದರ ಆರೈಕೆ ಮಾಡಿದನು. ತಾಯಿಯನ್ನು ಕಳೆದುಕೊಂಡ ಜಿಂಕೆಮರಿಯ ಬಗ್ಗೆ ಭರತನಿಗೆ ಕನಿಕರದ ಜೊತೆಗೆ ಪ್ರೀತಿಯೂ ಬೆಳೆಯಿತು. ಅದರ ಲಾಲನೆಪಾಲನೆಯಲ್ಲೇ ಸಂಪೂರ್ಣ ಕಾಲವನ್ನು ಕಳೆಯತೊಡಗಿದನು. ತನ್ನ ನಿತ್ಯಕರ್ಮಗಳಾದ ಜಪ, ತಪ, ಧ್ಯಾನಗಳನ್ನು ಸಂಪೂರ್ಣವಾಗಿ ಮರೆತನು. ಇದ್ದಕ್ಕಿದ್ದಂತೆ ಆ ಜಿಂಕೆಮರಿಯು ಒಂದು ದಿನ ಕಾಣೆಯಾಯಿತು. ಅದಕ್ಕಾಗಿ ಗಿರಿಕಂದರ ಅರಣ್ಯಗಳನ್ನೆಲ್ಲಾ ಹುಡುಕಿದನು. ಆದರೆ, ಜಿಂಕೆಮರಿ ಎಲ್ಲೂ ಸಿಗಲಿಲ್ಲ. ಕಡೆಯಲ್ಲಿ ಅದನ್ನೇ ನೆನೆಯುತ್ತ ಪ್ರಾಣಬಿಟ್ಟನು.

ಜಿಂಕೆಯಮರಿಯನ್ನು ಸ್ಮರಿಸುತ್ತಲೇ ಅಸುನೀಗಿದ್ದರಿಂದ, ಭರತನು ಮುಂದಿನ ಜನ್ಮದಲ್ಲಿ ಜಿಂಕೆಯಾಗಿಯೇ ಜನಿಸಿದನು. ಪೂರ್ವಜನ್ಮದ ತನ್ನ ತಪಸ್ಸಿನ ಪ್ರಭಾವದಿಂದ ಆ ಜಿಂಕೆಮರಿಗೆ ತನ್ನ ಹಿಂದಿನ ಜನ್ಮದ ನೆನಪು ಮಾಸಿರಲಿಲ್ಲ. ತಾನು ಹಿಂದೆ ತಪಸ್ಸು ಮಾಡಿದ್ದ ಗಂಡಕಿ ನದಿಯ ತೀರದಲ್ಲಿನ ಆಶ್ರಮದಲ್ಲಿಯೇ ಅದು ನೆಲಸಿತು. ಶ್ರೀಹರಿಯನ್ನು ಧ್ಯಾನಿಸುತ್ತಾ ಅಲ್ಲಿಯೇ ಬೆಳೆದ ಹಣ್ಣುಗಳನ್ನು ತಿನ್ನುತ್ತಾ ದಿನ ಕಳೆಯಿತು. ಆಯುಷ್ಯ ತೀರಿದಾಗ ಭಗವಂತನನ್ನು ಧ್ಯಾನಿಸುತ್ತಾ ದೇಹತ್ಯಾಗ ಮಾಡಿತು.

ಮುಂದಿನ ಜನ್ಮದಲ್ಲಿ ಜಿಂಕೆಯು ಒಬ್ಬ ಬ್ರಾಹ್ಮಣನ ಕಿರಿಯ ಹೆಂಡತಿಯ ಕೊನೆಯ ಮಗನಾಗಿ 'ಭರತ' ಎಂಬ ಹೆಸರಿನಿಂದಲೇ ಜನಿಸಿತು. ಭರತನ ತಂದೆಯು ಯಜ್ಞ–ಯಾಗಾದಿಗಳನ್ನು ಮಾಡುತ್ತಿದ್ದನು; ವೇದಶಾಸ್ತ್ರಗಳಲ್ಲಿ ನೈಪುಣ್ಯ ಪಡೆದಿದ್ದನು. ಇನ್ನಿತರ ಮಕ್ಕಳಿಗೂ ತನ್ನ ವಿದ್ಯೆಯನ್ನು ಧಾರೆಯೆರೆದಿದ್ದನು. ಆದರೆ ಭರತನಿಗೆ ಮಾತ್ರ ವಿದ್ಯೆ ಹತ್ತಲೇ ಇಲ್ಲ. ಯಾವುದರಲ್ಲೂ ಆಸಕ್ತನಾಗದೆ, ಏನೂ ತಿಳಿಯದವನಂತೆ, ಹುಚ್ಚನಂತೆ ವರ್ತಿಸುತ್ತಿದ್ದನು. ಉಪನಯನ ಸಂಸ್ಕಾರ ಮಾಡಿದರೂ ಏನೂ ಪ್ರಯೋಜನ ಆಗಲಿಲ್ಲ. ಎಲ್ಲರೂ ಇವನನ್ನು ಹೆಡ್ಡನೆಂದೇ ತೀರ್ಮಾನಿಸಿದ್ದರು. ಯಾವಾಗಲೂ ಜಡವಾಗಿ ಇರುತ್ತಿದ್ದರಿಂದ ಇವನನ್ನು 'ಜಡಭರತ' ಎಂದು ಕರೆಯ ತೊಡಗಿದರು.

ಆದರೆ, ಭರತನು ತನ್ನ ಹಿಂದಿನ ಜನ್ಮದ ನೆನಪುಗಳನ್ನು ಕಳೆದುಕೊಂಡಿರಲಿಲ್ಲ. ಹೀಗಾಗಿ ಲೌಕಿಕ ವಿಷಯಗಳಾವುವೂ ಉನ್ನತ ಮಾರ್ಗಕ್ಕೆ ಕರೆದೊಯ್ಯಲಾರವೆಂದು ಅವನು ಸ್ಪಷ್ಟವಾಗಿ ತಿಳಿದಿದ್ದನು. ಯಾವಾಗಲೂ ಶ್ರದ್ಧಾಭಕ್ತಿಗಳಿಂದ ಭಗವಂತನಾದ ಶ್ರೀಮನ್ನಾರಾಯಣನನ್ನೇ ಧ್ಯಾನಿಸುತ್ತಿದ್ದನು.

ಕಾಲಾಂತರದಲ್ಲಿ ಆತನ ತಂದೆ ಮರಣ ಹೊಂದಿದನು. ಆತನ ಅಣ್ಣಂದಿರು ಇವನೊಬ್ಬ ಪೆದ್ದನೆಂದು ಜರಿದರು. ಇವನಿಗೆ ಸುಮ್ಮನೆ ಊಟ ಹಾಕಬಾರದೆಂದು, ಹೊಲ ಕಾಯಲು ಬಿಟ್ಟರು. ಹೊಲದಲ್ಲಿ ಒಂದು ಅಟ್ಟವನ್ನು ಕಟ್ಟಿ, ಅದರ ಮೇಲೊಂದು ಗುಡಿಸಲು ಹಾಕಿ ಅಲ್ಲಿಯೇ ಇರಲು ಹೇಳಿದರು.

ಆ ಸಮಯದಲ್ಲಿ ಕಳ್ಳರ ಗುಂಪೊಂದು ಸಕ್ರಿಯವಾಗಿತ್ತು. ಅದರ ನಾಯಕನಂತೂ ದಿನವೂ ಕೊಳ್ಳೆಹೊಡೆದು ಅಗಾಧವಾದ ಸಂಪತ್ತನ್ನು ಗಳಿಸಿದ್ದನು. ಈ ಗುಂಪಿನ ಜನರು ಕಾಳಿಕಾದೇವಿಯನ್ನು ಕುಲದೈವವಾಗಿ ಆರಾಧಿಸುತ್ತಿದ್ದರು. ಈ ಗುಂಪಿನ ನಾಯಕನಿಗೆ ಮಕ್ಕಳಾಗಿರಲಿಲ್ಲ. ಒಂದು ದಿನ, "ತಾಯೇ, ನೀನು ಮಗನನ್ನು ಕರುಣಿಸಿದರೆ ನಿನಗೆ ನರಬಲಿ ಕೊಡುತ್ತೇನೆ" ಎಂದು ಅವನು ಬೇಡಿಕೊಂಡನು. ಕಾಕತಾಳೀಯವೋ ಎನ್ನುವಂತೆ ಒಂಬತ್ತು ತಿಂಗಳ ನಂತರ ಅವನಿಗೆ ಗಂಡುಮಗುವೊಂದು ಜನಿಸಿತು. ಇದರಿಂದ ಆತನಿಗೆ ಅತ್ಯಂತ ಆನಂದವಾಯಿತು. ಬಲಿಗಾಗಿ ಒಬ್ಬ ವ್ಯಕ್ತಿಯನ್ನು ಹಿಡಿದು ತರಲು ತನ್ನ ಅನುಚರರಿಗೆ ಆಜ್ಞೆ ಮಾಡಿದನು. ಹಾಗೆ ಮಾಡಿದರೆ, ಬೇಕಾದಷ್ಟು ಧನವನ್ನು ಕೊಡುತ್ತೇನೆಂದೂ ಆಸೆ ತೋರಿಸಿದನು. ಆ ಕಳ್ಳರ ಗುಂಪು ಅತ್ತಿತ್ತ ಹುಡುಕುತ್ತಿದ್ದಾಗ, ಅಟ್ಟದ ಮೇಲಿದ್ದ ಗುಡಿಸಲಲ್ಲಿದ್ದ ಜಡಭರತನು ಕಣ್ಣಿಗೆ ಬಿದ್ದನು. ಕಳ್ಳರು ಗುಡಿಸಲಿನಿಂದ ಆತನನ್ನು ಹೊರಗೆ ಕರೆತಂದರು. ರಟ್ಟೆಗೆ ಹಗ್ಗ ಕಟ್ಟಿ ಎಳೆದುಕೊಂಡು ಹೋಗಿ ಅವನನ್ನು ತಮ್ಮ ನಾಯಕನ ಮುಂದೆ ನಿಲ್ಲಿಸಿದರು. ಭರತನು ಇದಾವುದಕ್ಕೂ ಪ್ರತಿಭಟಿಸಲಿಲ್ಲ. ಅವನು ಒಂದೇ ಮನಸ್ಸಿನಿಂದ ಶ್ರೀಹರಿಯನ್ನು ಧ್ಯಾನಿಸುತ್ತಿದ್ದನು. ಬಳಿಕ ಕಳ್ಳರ ಗುಂಪಿನವರು ಭರತನನ್ನು, ಕಾಳಿಕಾದೇವಿಯ ದೇವಾಲಯಕ್ಕೆ ತಂದರು. ಅರ್ಚಕನು ಇನ್ನೇನು ತನ್ನ ಖಡ್ಗದಿಂದ ಭರತನನ್ನು ಕತ್ತರಿಸಬೇಕೆನ್ನುವಷ್ಟರಲ್ಲಿ, ಕಾಳಿಕಾದೇವಿಯು ಪ್ರತ್ಯಕ್ಷಳಾಗಿ ಅದೇ ಖಡ್ಗದಿಂದ ಅಲ್ಲಿದ್ದವರನ್ನೆಲ್ಲಾ ಸಂಹರಿಸಿದಳು. ಭರತನು ಸುರಕ್ಷಿತವಾಗಿ ಅಲ್ಲಿಂದ ತೆರಳಿದನು. ತನ್ನ ಪಾಡಿಗೆ ತಾನು ನಡೆಯುತ್ತ ಹೋದನು.

ಅಂದಿನ ಕಾಲಕ್ಕೆ ಸಿಂಧೂ ದೇಶವನ್ನು ರಹೂಗಣ ಎಂಬ ರಾಜನು ಆಳುತ್ತಿದ್ದನು. ಅವನು ಅಧ್ಯಾತ್ಮ ಉಪದೇಶವನ್ನು ಪಡೆಯಲು ಕಪಿಲ ಮಹಾಮುನಿಯನ್ನು ಕಾಣಬೇಕೆಂದು ಪಲ್ಲಕ್ಕಿಯಲ್ಲಿ ಕುಳಿತು ಹೋಗುತ್ತಿದ್ದನು. ಪಲ್ಲಕ್ಕಿ ಹೊರಲು ಒಬ್ಬ ಆಳು ಹೆಚ್ಚಾಗಿ ಬೇಕಾಗಿತ್ತು. ದಾರಿಯಲ್ಲಿ ಜಡಭರತನು ಇವರಿಗೆ ಎದುರಾದನು. ಅವನ ಮೇಲೆ ಪಲ್ಲಕ್ಕಿಯ ಒಂದು ಬದಿಯನ್ನು ಹೊರಿಸಿದರು. ಆದರೆ ಪಲ್ಲಕ್ಕಿ ಹೊರುವ ಅಭ್ಯಾಸ ಇಲ್ಲದ ಭರತನು ತಪ್ಪಾಗಿ ಹೆಜ್ಜೆ ಇಡುತ್ತಿದ್ದನು. ಒಳಗಿದ್ದ ರಾಜನಿಗೆ ಇದರಿಂದ ಇರಿಸು ಮುರುಸಾಯಿತು. ತುಸು ಸಿಟ್ಟಿಗೆದ್ದು ಭರತನನ್ನು ಬೈದನು. ಆದರೆ ಭರತನು ಹಾಗೆಯೇ ನಡೆಯುತ್ತಿದ್ದನು. ಇದನ್ನು ಕಂಡು ರಾಜನು, "ನಿನಗೆ ಶಿಕ್ಷೆ ಕೊಡಬೇಕಾಗುತ್ತದೆ" ಎಂದು ಎಚ್ಚರಿಸಿದನು.

ಆಗ ಜಡಭರತನು ತಿಳಿವಳಿಕೆಯ ಮಾತುಗಳನ್ನು ಆಡಿದನು: "ಅಯ್ಯಾ ರಾಜ, ಶಿಕ್ಷೆ ಕೊಡಲು ನೀನು ಯಾರು? ನಾನು ಭಾರ ಹೊತ್ತಿದ್ದೇನೆಂದು ಹೇಳುತ್ತಿದ್ದೀಯಲ್ಲ, ಭಾರ ಹೊತ್ತುಕೊಂಡಿರುವವನು ನಾನಲ್ಲ, ನನ್ನ ದೇಹ. ನಾನೇ ಬೇರೆ, ನನ್ನ ದೇಹವೇ ಬೇರೆ. ಈಗ ಹೇಳು, ನೀನು ಶಿಕ್ಷೆಯನ್ನು ಯಾರಿಗೆ ನೀಡುತ್ತೀಯೆ, ನನಗೋ ನನ್ನ ದೇಹಕ್ಕೋ? ನೀನು ನನ್ನನ್ನು 'ದಾಸ' ಎಂದು ಕರೆದೆ. ನೀನಾಗಲಿ ನಾನಾಗಲಿ ಎಲ್ಲರೂ ಜಗದ್ರಕ್ಷಕನಾದ ಭಗವಂತನ ಅಧೀನದಲ್ಲಿದ್ದೇವೆ. ಹಾಗಾಗಿ ನನ್ನನ್ನಾಗಲಿ, ನನ್ನ ದೇಹವನ್ನಾಗಲಿ ದಂಡಿಸಲು ನಿನಗೆ ಅಧಿಕಾರವೇ ಇಲ್ಲ. ಆ ಅಧಿಕಾರ ಇರುವುದು ಪರಮಾತ್ಮನಿಗೆ ಮಾತ್ರ."

ಈ ಮಾತುಗಳನ್ನು ಕೇಳಿ ರಾಜನು ಗಾಬರಿಯಾದನು. ಈ ವ್ಯಕ್ತಿ ಒಬ್ಬ ಜ್ಞಾನಿಯೆಂದು ಕಂಡುಕೊಂಡನು. ಕೂಡಲೇ ಪಲ್ಲಕ್ಕಿಯಿಂದ ಇಳಿದು ಅವನ ಪಾದಗಳಿಗೆ ಬಿದ್ದನು. "ನೀವು ಸಾಮಾನ್ಯರಲ್ಲ. ನೀವೇ ನನಗೆ ಗುರು. ನನಗೆ ಜ್ಞಾನೋಪದೇಶ ಮಾಡಬೇಕು" ಎಂದು ವಿನಂತಿಸಿದನು. ಅಲ್ಲದೆ ಕೆಲವು ಸಂದೇಹಗಳನ್ನು ಅವನ ಮುಂದಿಟ್ಟನು. ಅದಕ್ಕೆ ಭರತನು ಸೂಕ್ತ ಪರಿಹಾರವನ್ನು ನೀಡಿದನು. ಅದರ ತಿರುಳು ಹೀಗಿದೆ:

" ರಾಜನ್, ಆತ್ಮವು ದೇಹ, ಇಂದ್ರಿಯ, ಮನಸ್ಸು – ಇವುಗಳ ಜಾತಿಗೆ ಸೇರಿದುದಲ್ಲ. ಆದ್ದರಿಂದ ಅವುಗಳಿಗೆ ಆಗುವ ನೋವು ಆತ್ಮಕ್ಕೆ ತಟ್ಟುವುದಿಲ್ಲ. ದುಃಖಕ್ಕೆ ಕಾರಣ ಅಭಿಮಾನ. ಇದನ್ನೇ 'ಮಾಯೆ' ಎನ್ನುತ್ತಾರೆ. ಮನಸ್ಸು ವಿಷಯವಸ್ತುಗಳ ಮೇಲಿನ ಅಭಿಮಾನದಿಂದ ಅವುಗಳ ಕಡೆಗೆ ಒಲಿಯುತ್ತದೆ. ಆಗ ಮಾತ್ರ ನೋವು, ನಲಿವುಗಳ ಭಾವನೆ ಬರುತ್ತದೆ. ವಿಷಯಗುಣಗಳಲ್ಲಿ ಅನುರಕ್ತಿ ಬಂದಾಗ ಮಾತ್ರ ಸುಖದುಃಖಗಳು ಉಂಟಾಗುತ್ತವೆ; ಆತ್ಮನಲ್ಲಿ ಅನುರಕ್ತಿಯಾದಾಗ ಸುಖವೂ ಇಲ್ಲ, ದುಃಖವೂ ಇಲ್ಲ.

"ರಾಜನ್, ನೀನೊಬ್ಬ ರಾಜನೆಂದು ಅಭಿಮಾನ ಪಡುತ್ತಿದ್ದೀಯೆ. ಆ ಅಧಿಕಾರದ ಅಭಿಮಾನದಿಂದಲೇ, 'ನನ್ನ ಪ್ರಜೆಗಳಿಗೆಲ್ಲ ಅನ್ನ ಆಹಾರಾದಿಗಳನ್ನು ಕೊಡುತ್ತಿರುವುದು ನಾನೇ' ಎಂಬ ಅಹಂಕಾರವನ್ನು ಬೆಳೆಸಿಕೊಂಡಿದ್ದೀಯೆ. ಆದರೆ, ಸಕಲ ಜೀವರಾಶಿಗಳ ಶರೀರ ಇಂದ್ರಿಯಗಳ ಸ್ವರೂಪವನ್ನು ತಿಳಿದವನೂ, ಜಗತ್ತಿಗೆ ಆದಿಕಾರಣನಾದವನೂ, ಸರ್ವೋತ್ತಮನೂ ಆದ ಪರಮ ಪುರುಷನು ಇನ್ನೊಬ್ಬನಿದ್ದಾನೆ. ಅವನೇ ಶ್ರೀಮನ್ನಾರಾಯಣ. ಅವನು ಸರ್ವಸ್ವತಂತ್ರನು, ಅವಿನಾಶಿ ಮತ್ತು ಅಪರಿಮಿತ ತೇಜಸ್ಸುಳ್ಳವನು. ಆತನೇ ಎಲ್ಲ ಜೀವರಾಶಿಗಳ ಸಂರಕ್ಷಕನು.

"ಆದ್ದರಿಂದ, ಅಧ್ಯಾತ್ಮಜೀವಿಯಾದವನು ಮೊದಲು ದೇಹಾಭಿಮಾನವನ್ನು ತ್ಯಜಿಸಬೇಕು. ಕಾಮಕ್ರೋಧಗಳನ್ನು ಜಯಿಸಬೇಕು. ಆತ್ಮನ ಸ್ವರೂಪವನ್ನು ತಿಳಿಯುವುದೇ ಅವನ ಪ್ರಥಮ ಕರ್ತವ್ಯವಾಗಬೇಕು. ಚಂಚಲವಾದ ಮನಸ್ಸನ್ನು ತೊರೆದು ಏಕಾಗ್ರಭಕ್ತಿಯಿಂದ ಭಗವಂತನ ಪಾದಕ್ಕೆ ಶರಣಾಗುವುದೊಂದೇ ಸಂಸಾರದಿಂದ ಪಾರಾಗುವ ಏಕಮಾತ್ರ ಪರಿಹಾರಮಾರ್ಗ."

ಈ ಉಪದೇಶವನ್ನು ಕೇಳಿ ರಾಜನಾದ ರಹೂಗಣನಿಗೆ ಕಣ್ಣು ತೆರೆಯಿತು. ಅವನು ತೃಪ್ತನಾಗಿ ತನ್ನ ದೇಶಕ್ಕೆ ಹಿಂತಿರುಗಿ ಹೋದನು. ಬಳಿಕ ಧರ್ಮದಿಂದ ರಾಜ್ಯವಾಳಿದನು. *